# ಇದೇ ಸಮಯ ರಂಗ ಬಾರೆಲೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** Singer has followed these lyrics.

ರಾಗ: ಸೌರಾಷ್ಟ್ರ ತಾಳ: ಆದಿ

ಇದೇ ಸಮಯ ರಂಗ ಬಾರೆಲೊ
ಇದೇ ಸಮಯ ಕೃಷ್ಣ ಬಾರೆಲೊ ॥ ಪ ॥

ಅತ್ತಿಗೆ ಲಕ್ಷ ಬತ್ತಿ ಶೀಲಳೋ
ಅಷ್ಟು ಆಗದೆ ಅವಳೇಳಳೊ
ಅತ್ತೆ ಪುರಾಣದಿ ಲೋಲಳೊ ಸರಿ
ಹೊತ್ತಿನ ವೇಳೆಗೆ ಬರುವಳೊ ॥ 1 ॥

ಮಾವ ಎನ್ನಲಿ ಅವಿಶ್ವಾಸಿಯೊ ಮ-
ದುವೆಯಾದ ಗಂಡ ಬಲು ಉದಾಸಿಯೊ
ಭಾವನು ಎನ್ನ ಸೇರ ಹೇಸಿಯೊ ನೀ
ನೀ ವೇಳೆಗೆ ಬಂದರೆ ವಾಸಿಯೊ ॥ 2 ॥

ತಂದೆ ತಾಯ ಆಸೆ ಮಾಡೆನೊ
ಎನ್ನ ಕಂದನ ಮೇಲೆ ಮನಸಿಡೆನೊ
ಮಂದರಧರ ಪುರಂದರ ವಿಠ್ಠಲ ನೀ
ಬಂದರೆ ಚರಣ ಸೇವೆ ಮಾಳ್ಪೆನೋ ॥ 3 ॥

**Classification:** Keerthane
**Ankita:** purandara vittala
**Location:** NA
**Category:** Binnaha

**Sub-Category:** ranga, Krishna, purana, maduve, pati, tande, tayi, Ase, koosu, mana,
**Pravachana:** NA
**Explanation:** NA